**<u>ದಿನಾಂಕಃ 22-08-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 2 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ ಎನ್.ಎಸ್.ಬಿ. ವಕೀಲರಿಂದಃ</u>**

18. ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರ ಮೂಲ ಪುರುಷ ಹೇಮನಗೌಡ ಬಸನಗೌಡ ಪಾಟೀಲ ಎಂದರೆ ಸರಿ. ಸದರಿ ಹೇಮನಗೌಡ ಪಾಟೀಲ ರವರ ಹೆಂಡತಿ ಮರಡೆವ್ವ ಎಂದರೆ ಸರಿ. ಸದರಿ ಮೂಲ ಪುರುಷ ಹೇಮನಗೌಡ ಬಸನಗೌಡ ಪಾಟೀಲ ರವರಿಗೆ ಬಸನಗೌಡ ಮತ್ತು ಶಿವನಗೌಡ ಎಂಬ ಎರಡು ಜನ ಗಂಡು ಮಕ್ಕಳು ಎಂದರೆ ಸರಿ. ಸದರಿ 2 ನೇ ಮಗ ಶಿವನಗೌಡರವರು ಈ ದಾವೆಯಲ್ಲಿ 1 ನೇ ಪ್ರತಿವಾದಿಯಾಗಿದ್ದಾರೆ ಎಂದರೆ ಸರಿ. ಮೂಲ ಪುರುಷನ 1 ನೇ ಮಗ ಬಸನಗೌಡ ರವರು 1981 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಬಸನಗೌಡರವರ ಹೆಂಡತಿ ಬಸವ್ವರವರು 5 ವರ್ಷದ ಹಿಂದೆ ಈ ದಾವೆ ದಾಖಲಿಸುವ ಪೂರ್ವದಲ್ಲಿ ಪೋತಿಯಾಗಿದ್ದಾರೆ ಎಂದರೆ ಸರಿ. ಸದರಿ ಬಸನಗೌಡ ಮತ್ತು ಬಸವ್ವರವರಿಗೆ 2 ರಿಂದ 4 ನೇ ಪ್ರತಿವಾದಿಯರು ಮಕ್ಕಳು ಎಂದರೆ ಸರಿ. 5 ನೇ ಪ್ರತಿವಾದಿ 3 ನೇ ಪ್ರತಿವಾದಿಯ ಮಗ ಎಂದರೆ ಸರಿ. 1 ನೇ ಪ್ರತಿವಾದಿ ಶಿವನಗೌಡ ಈ ದಾವೆ ದಾಖಲಿಸಿದ ನಂತರ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಈ ದಾವೆ ದಾಖಲಿಸುವ ಪೂರ್ವದಲ್ಲೇ ತೀರಿಕೊಂಡಿರುತ್ತಾರೆ ಎನ್ನುತ್ತಾರೆ. 1 ನೇ ಪ್ರತಿವಾದಿ ದಿನಾಂಕಃ 01.04.2021 ರಂದು ಪೌತಿಯಾಗಿರುತ್ತಾರೆ ಎಂದರೆ ಇರಬಹುದು. 1 ನೇ ಪ್ರತಿವಾದಿಯ ಪರ ನಾನು ವಕಾಲತ್ ನಾಮೆ ಸಲ್ಲಿಸಿದ್ದು ಆನಂತರ ಆತ ತೀರಿಕೊಂಡಿರುತ್ತಾನೆ ಎಂದರೆ ಸರಿ.

19. ಈಗ ಸಾಕ್ಷಿಗೆ 1 ನೇ ಪ್ರತಿವಾದಿಯ ಮರಣ ಪ್ರಮಾಣ ಪತ್ರವನ್ನು ತೋರಿಸಿದ್ದು ಅದರಲ್ಲಿ ಆತನ ಮರಣದ ದಿನಾಂಕಃ 04.06.2021 ಎಂದು ನಮೂದಿಸಿದೆ ಎಂದರೆ ಸರಿ. ಸದರಿ ಮರಣ ಪ್ರಮಾಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ-10 ಎಂದು ಗುರುತಿಸಲಾಗಿದೆ. 1 ನೇ ಪ್ರತಿವಾದಿಯ ಹೆಂಡತಿ ಹೆಸರು ಗೌರವ್ವ ಎಂದರೆ ನನಗೆ ಗೊತ್ತಿಲ್ಲ. ಸದರಿ 1 ನೇ ಪ್ರತಿವಾದಿಯ ಮದುವೆ

ಆಗಿತ್ತು. ಸದರಿ 1 ನೇ ಪ್ರತಿವಾದಿಯ ಹೆಂಡತಿಯ ಹೆಸರು ಗೌರವ್ವ ಎಂದರೆ ನನಗೆ ಗೊತ್ತಿಲ್ಲ ಅವರು ಬಹಳ ದಿನಗಳ ಹಿಂದೆ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ 1 ನೇ ಪ್ರತಿವಾದಿ ಹಾಗೂ ಗೌರವ್ವ ರವರ ಮಗಳೇ ವಾದಿ ಚೆನ್ನಬಸವ್ವ ಎಂದರೆ ಸರಿ. ದಾವಾ ಶೆಡ್ಯೂಲ್ ಬ ದಲ್ಲಿ ನಮೂದಿಸಿದ 4 ನೇ ಆಸ್ತಿಯನ್ನು ಬಿಟ್ಟು ಉಳಿದ ಎಲ್ಲ ದಾವಾ ಸ್ವತ್ತುಗಳು ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ನಾನು ಈದಾವೆಯಲ್ಲಿ ಮೊದಲು ಪ್ರತಿವಾದಿ 1, 3 ಮತ್ತು 5 ರವರ ಪರ ವಕಾಲತ್ ಸಲ್ಲಿಸಿದ್ದೆ ಎಂದರೆ ಸಾಕ್ಷಿ ಜಂಟಿಯಾಗಿ ಸಲ್ಲಿಸಿದ್ದೆ ಎನ್ನುತ್ತಾರೆ. ಸದರಿ ಪ್ರತಿವಾದಿ ಸಂಖ್ಯೆಃ3 ಮತ್ತು 5 ರವರ ಪರ ಪ್ರತಿವಾದ ಪತ್ರಕ್ಕೆ ನಾನೇ ಸಹಿ ಮಾಡಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಸಮಯದಲ್ಲಿ ನಾನು ಸದರಿ ಪ್ರತಿವಾದಿಯರ ದಾವಾ ಸ್ವತ್ತುಗಳಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ನೋಡಿರುತ್ತೇನೆ ಎಂದರೆ ಸರಿ. ದಾವಾ ಶೆಡ್ಯೂಲ್ ಬಿ ನಲ್ಲಿ ನಮೂದಿಸಿದ 4 ನೇ ಆಸ್ತಿ ಹಾಗೂ ಶೆಡ್ಯೂಲ್ ಕ ದಲ್ಲಿ ನಮೂದಿಸಿದ ಆಸ್ತಿಗಳನ್ನು ಬಿಟ್ಟು ಉಳಿದ ಆಸ್ತಿಗಳು ವಾದಿ ಹಾಗೂ 1 ರಿಂದ 4 ನೇ ಪ್ರತಿವಾದಿಯರಿಗೆ ಹೇಗೆ ಬಂದಿದ್ದಾವೆ ಎಂದರೆ ಸಾಕ್ಷಿ 2 ರಿಂದ 4 ನೇ ಪ್ರತಿವಾದಿಯರ ತಂದೆ ಬಸನಗೌಡ ರವರಿಗೆ 1973 ರಲ್ಲಿ ಮಂಜೂರಾಗಿವೆ ಎನ್ನುತ್ತಾರೆ. ಸದರಿ 2 ರಿಂದ 4 ನೇ ಪ್ರತಿವಾದಿಯರ ತಂದೆ ಬಸನಗೌಡರವರಿಗೆ ಸದರಿ ಆಸ್ತಿಗಳು ಮಂಜೂರಾದ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಡ ಉತಾರುಗಳು ಇವೆ ಎನ್ನುತ್ತಾರೆ. ಸದರಿ ಡ ಉತಾರುಗಳ ನಂಬರ್ ನನಗೆ ನೆನಪಿಲ್ಲ. ಅದಕ್ಕೆ ಸಂಬಂಧಿಸಿದಂತೆ ಯಾವುದೇ ಡ ಉತಾರುಗಳು ಇಲ್ಲದೇ ಇದ್ದರೂ ಸಹ ಇವೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಬಿ ನಲ್ಲಿ ನಮೂದಿಸಿದ 4 ನೇ ಆಸ್ತಿ ಬಿಟ್ಟು ಉಳಿದ ಆಸ್ತಿಗಳು ವಾದಿ ಹಾಗೂ 1 ರಿಂದ 4 ನೇ ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಗಳು ಇವೆ ಎಂದು ನನಗೆ ಗೊತ್ತಿದ್ದರೂ ಸಹಇಲ್ಲ ಎಂದು ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

20. ನಾನು ದಿನಾಂಕಃ 03.01.1984 ರಂದು ಜನಿಸಿರುತ್ತೇನೆ. ನಾನು 8-9 ವರ್ಷ ವಯಸ್ಸಿನವನು ಇದ್ದಾಗ ನನಗೆ ತಿಳುವಳಿಕೆ ಬಂದಿರುತ್ತದೆ. ನನಗೆ 15-16

ವಯಸ್ಸು ಆದ ನಂತರ ತಿಳುವಳಿಕೆ ಬಂದಿದ್ದರೂ ಸಹ 8-9 ವರ್ಷ ವಯಸ್ಸಿನವನು ಇದ್ದಾಗ ತಿಳುವಳಿಕೆ ಬಂದಿರುತ್ತದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1993 ರ ಪೂರ್ವದಲ್ಲಿ ನಮ್ಮ ಗ್ರಾಮದಲ್ಲಿ ಯಾರ ಯಾರ ಮನೆಯಲ್ಲಿ ಯಾವ ಯಾವ ಘಟನೆಗಳು ನಡೆದಿವೆ ಎಂದು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ದಾಖಲೆಗಳ ಆಧಾರದ ಮೇಲೆ ಏನು ನಡೆದಿದೆ ಎಂದು ಹೇಳಬಲ್ಲೇ ಎನ್ನುತ್ತಾರೆ. ನಾನು ಪ್ರತಿವಾದಿ 3 ಮತ್ತು 5 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸದರಿ ದಾಖಲೆಗಳ ಆಧಾರದ ಮೇಲೆ ಏನು ನಡೆದಿದೆ ಎಂದು ಹೇಳಬಲ್ಲೇ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

21. ವಾದಿ ಹಾಗೂ 1 ರಿಂದ 4 ನೇ ಪ್ರತಿವಾದಿಯರ ಮನೆತನದ ಹಿರಿಯತನವನ್ನು ಮೂಲಪುರುಷ ತೀರಿಕೊಂಡ ನಂತರ ಆತನ ಹಿರಿಯ ಮಗನಾದ ಬಸನಗೌಡರವರು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಬಸನಗೌಡರವರು ಮನೆಯ ಹಿರಿಯತನ ಮಾಡುತ್ತಾ ಬಂದು 1981 ರಲ್ಲಿ ತೀರಿಕೊಂಡರು ಎಂದರೆ ಸಾಕ್ಷಿ 1981 ರಲ್ಲಿ ತೀರಿಕೊಂಡಿರುವುದು ನಿಜ ಆದರೆ ಅವರು ಮನೆಯ ಹಿರಿಯತನವನ್ನು ಮಾಡುತ್ತಿರಲಿಲ್ಲ ಅವರವರ ಮನೆಯ ಹಿರಿಯತನವನ್ನು ಅವರವರು ಮಾಡುತ್ತಿದ್ದರು ಎನ್ನುತ್ತಾರೆ. ಸದರಿ ಮೂಲ ಪುರುಷನ ಮಕ್ಕಳು ವಿಭಾಗ ಮಾಡಿಕೊಂಡಿದ್ದಾರೆ ಎಂದು ತೋರಿಸುವ ದಾಖಲೆಯನ್ನು ನಾನು 1, 3, ಮತ್ತು 5 ನೇ ಪ್ರತಿವಾದಿಯರ ಪರ ವಕಾಲತ್ ವಹಿಸಿದ್ದಾಗ ನಾನು ಹಾಜರು ಪಡಿಸಿರಲಿಲ್ಲ ಹಾಗೂ ಆನಂತರದ ವಕೀಲರು ಸಹ ಹಾಜರು ಪಡಿಸಿಲ್ಲ ಎಂದರೆ ಸರಿ.

22. 1977 ನೇ ಸಾಲಿನಲ್ಲಿ 1 ನೇ ಪ್ರತಿವಾದಿಗೆ ಎಷ್ಟು ಗೌರವಧನ ಬರುತ್ತಿತ್ತು ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಸದರಿಯವರಿಗೆ ಗೌರವಧನ ಬರುತ್ತಿದ್ದ ಬಗ್ಗೆ ನಾನು ದಾಖಲಾತಿ ನೋಡಿಲ್ಲ ಎಂದರೆ ಸರಿ. ದಾವಾ ಬ ಶೆಡ್ಯೂಲ್ 1 ರಿಂದ 3, 5 ರಿಂದ 14 ನೇ ಆಸ್ತಿಗಳಿಂದ ಬಂದ ಆದಾಯದಿಂದ ಸದರಿ ದಾವಾ ಶೆಡ್ಯೂಲ್‌ನ 4 ನೇ ಆಸ್ತಿಯನ್ನು 1 ನೇ ಪ್ರತಿವಾದಿಯ ಹೆಸರಿಗೆ ಖರೀದಿ ಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಖರೀದಿಸಿದ ಸಮಯದಲ್ಲಿ ನಾನು ಜನಿಸದ ಕಾರಣದಿಂದ ಹಾಗೂ 1993 ರವರೆಗೆ ನನಗೆ ತಿಳುವಳಿಕೆ ಇಲ್ಲದ ಕಾರಣದಿಂದ ಸದರಿ ಆಸ್ತಿಗಳನ್ನು ಯಾವ ರೀತಿ

ಖರೀದಿಸಿರುತ್ತಾರೆ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಡ ಉತಾರಗಳ ಆಧಾರದ ಮೇಲೆ ಹೇಳಬಲ್ಲೇ ಎನ್ನುತ್ತಾರೆ. ಸದರಿ 1 ನೇ ಪ್ರತಿವಾದಿ ಸದರಿ ಬ ಶೆಡ್ಯೂಲ್ ನ 4 ನೇ ಅನುಕ್ರಮದ ಸ್ವತ್ತನ್ನು ಸ್ವಯಾರ್ಜಿತವಾಗಿ ಖರೀದಿಸಿರುತ್ತಾರೆ ಎಂದು ಸದರಿ ಖರೀದಿ ಪತ್ರದ ಆಧಾರ ಮೇಲೆ ಹಾಗೂ ಡ ಉತಾರದ ಆಧಾರದ ಮೇಲೆ ಮಾತ್ರ ಹೇಳುತ್ತಿದ್ದೇನೆ ಎಂದರೆ ಸರಿ. ಸದರಿ ಖರೀದಿ ಪತ್ರವನ್ನು ನಾನು 1, 3 ಮತ್ತು 5 ನೇ ಪ್ರತಿವಾದಿಯರನ್ನು ಪ್ರತಿನಿಧಿಸುತ್ತಿದ್ದಾಗ ಹಾಜರು ಪಡಿಸಿಲ್ಲ ಎಂದರೆ ಸರಿ. ಸದರಿ ಖರೀದಿ ಪತ್ರದಲ್ಲಿ 1 ನೇ ಪ್ರತಿವಾದಿ ತನಗೆ ಬರುತ್ತಿದ್ದ ಗೌರವಧನದಿಂದ ಸದರಿ ಬಿ ಶೆಡ್ಯೂಲ್ ನ 4 ನೇ ಅನುಕ್ರಮದ ಸ್ವತ್ತನ್ನು ಖರೀದಿಸಿರುತ್ತಾರೆ ಎಂದು ಎಲ್ಲಿಯೂ ಬರೆದಿಲ್ಲ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಖರೀದಿ ಪತ್ರವನ್ನು ನಾನು ನೋಡದೆ ಇದ್ದರೂ ಸಹ ಹಾಗೂ ಸದರಿ ಖರೀದಿ ಪತ್ರದಲ್ಲಿ 1 ನೇ ಪ್ರತಿವಾದಿ ತನಗೆ ಬರುತ್ತಿದ್ದ ಗೌರವಧನದಿಂದ ಬಿ ಶೆಡ್ಯೂಲ್ ನ 4 ನೇ ಸ್ವತ್ತನ್ನು ಖರೀದಿಸಿರುತ್ತಾರೆ ಎಂದು ಎಲ್ಲಿಯೂ ಬರೆಯದೇ ಇದ್ದರೂ ಸಹ ಬರೆದಿದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಬಿ ಶೆಡ್ಯೂಲ್ ನ 4 ನೇ ಸ್ವತ್ತು ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರ ಏಕತ್ರ ಘರಾಣೆಯ ಸ್ವತ್ತು ಎಂದರೆ ಸರಿಯಲ್ಲ.

23. 2020 ನೇ ಸಾಲಿನಲ್ಲಿ 1 ನೇ ಪ್ರತಿವಾದಿಗೆ 88 ವಯಸ್ಸು ಆಗಿತ್ತು ಎಂದರೆ ಸರಿ. ಆತನಿಗೆ ಸದರಿ ಸಮಯದಲ್ಲಿ ಸರಿಯಾಗಿ ಓಡಾಡಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಹಾಗೂ ಸದರಿ ಸಮಯದಲ್ಲಿ ಆತನಿಗೆ ಏನು ಮಾಡುತ್ತಿದ್ದೇನೆ ಎಂಬ ಪರಿಜ್ಞಾನ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಸಮಯದಲ್ಲಿ ಆತ ಊರಿನಲ್ಲಿ ಹಿರಿಯತನ ಮಾಡುತ್ತಿದ್ದರು ಎನ್ನುತ್ತಾರೆ. ಆತ ಸದರಿ ಸಮಯದಲ್ಲಿ ಊರಿನಲ್ಲಿ ಹಿರಿಯತನ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಬಿ ಶೆಡ್ಯೂಲ್ ನ 4 ನೇ ಸ್ವತ್ತನ್ನು ಪರಾಧೀನ ಮಾಡುವ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

24. ನಿಡಿ-7 ದಾನಪತ್ರಕ್ಕೆ ಸಾಕ್ಷಿದಾರರಾಗಿ ಮಲ್ಲೇಶಪ್ಪ ಮತ್ತು ಸಿದ್ದನಗೌಡ ಎಂಬುವವರು ಸಹಿ ಮಾಡಿರುತ್ತಾರೆ. ಸದರಿ ಸಿದ್ದನಗೌಡ 3 ನೇ ಪ್ರತಿವಾದಿ ಎಂದರೆ ಸರಿ.

ಸದರಿ 3 ನೇ ಪ್ರತಿವಾದಿ 5 ನೇ ಪ್ರತಿವಾದಿಯ ತಂದೆ ಎಂದರೆ ಸರಿ. ಸದರಿ 3 ನೇ ಪ್ರತಿವಾದಿಯ ಪೂರ್ತಿ ಹೆಸರು ಸಿದ್ದನಗೌಡ ಬಸನಗೌಡ ಪಾಟೀಲ ಎಂದರೆ ಸರಿ. ನಾನು ಮೊದಲು 3 ನೇ ಪ್ರತಿವಾದಿಯ ಪರ ವಕಾಲತ್ತು ಸಲ್ಲಿಸಿದ್ದೆ ಎಂದರೆ ಸರಿ. ಈಗ ಸಾಕ್ಷಿಗೆ ಅವರು 3 ನೇ ಪ್ರತಿವಾದಿಯ ಪರವಾಗಿ ಸಲ್ಲಿಸಿದ ವಕಾಲತ್ ನಾಮೆಯನ್ನು ತೋರಿಸಿದ್ದು ಸದರಿ ವಕಾಲತ್ ನಾಮೆಯಲ್ಲಿನ 3 ನೇ ಪ್ರತಿವಾದಿಯ ಸಹಿಯನ್ನು ಸಾಕ್ಷಿಗೆ ತೋರಿಸಿದ್ದು ಸದರಿ ವಕಾಲತ್ ನಾಮೆಯನ್ನು ನಿಡಿ-11 ಎಂದು, 3 ನೇ ಪ್ರತಿವಾದಿಯ ಸಹಿಯನ್ನು ನಿಡಿ-11 ಎ ಎಂದು ಗುರುತಿಸಲಾಯಿತು.

25. ನಾನು 3 ನೇ ಪ್ರತಿವಾದಿಗೆ ನೋ ಅಬ್ಜೆಕ್ಷನ್ ನೀಡಿದ ನಂತರ ಬೇರೆ ವಕೀಲರು ದಿನಾಂಕಃ 14.03.2024 ರಂದು ಅವರಿಗೆ ವಕಾಲತ್ ನಾಮೆಯನ್ನು ಸಲ್ಲಿಸಿದ್ದು ಸದರಿ ವಕಾಲತನ್ನು ಸಾಕ್ಷಿಗೆ ತೋರಿಸಿದ್ದು ಅದರ ಮೇಲಿರುವ 3 ನೇ ಪ್ರತಿವಾದಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ವಕಾಲತ್ ನಾಮೆಯನ್ನು ನಿಡಿ-12 ಎಂದು, 3 ನೇ ಪ್ರತಿವಾದಿಯ ಸಹಿಯನ್ನು ನಿಡಿ-12 ಎ ಎಂದು ಗುರುತಿಸಲಾಯಿತು. ಆನಂತರ ದಿನಾಂಕಃ 13.08.2024 ರಂದು 3 ನೇ ಪ್ರತಿವಾದಿಗೆ ಬೇರೆ ವಕೀಲರು ಅವರಿಗೆ ವಕಾಲತ್ ನಾಮೆಯನ್ನು ಸಲ್ಲಿಸಿದ್ದು ಸದರಿ ವಕಾಲತನ್ನು ಸಾಕ್ಷಿಗೆ ತೋರಿಸಿದ್ದು ಅದರ ಮೇಲಿರುವ 3 ನೇ ಪ್ರತಿವಾದಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ವಕಾಲತ್ ನಾಮೆಯನ್ನು ನಿಡಿ-13 ಎಂದು, 3 ನೇ ಪ್ರತಿವಾದಿಯ ಸಹಿಯನ್ನು ನಿಡಿ-13 ಎ ಎಂದು ಗುರುತಿಸಲಾಯಿತು. ಸದರಿ ನಿಡಿ-11 ರಿಂದ 13 ವಕಾಲತ್ ನಾಮೆಗಳಲ್ಲಿ ಸದರಿ 3 ನೇ ಪ್ರತಿವಾದಿ ಶಿ.ಬ.ಪಾಟೀಲ ಎಂದು ಸಹಿ ಮಾಡಿರುತ್ತಾರೆ. ಅದೇರೀತಿ 3 ನೇ ಪ್ರತಿವಾದಿಯ ಪರವಾಗಿ ನಾನು ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ಆತ ತನ್ನ ಸಹಿಯನ್ನು ಕನ್ನಡ ಭಾಷೆಯಲ್ಲಿ ಶಿ.ಬ.ಪಾಟೀಲ ಎಂದು ಮಾಡಿರುತ್ತಾರೆ ಎಂದರೆ ಸರಿ.

26. ಈಗ ಸಾಕ್ಷಿಗೆ ನಿಡಿ-7 ದಾಖಲೆಯನ್ನು ತೋರಿಸಿದ್ದು ಸದರಿ ದಾಖಲೆಯಲ್ಲಿ 3 ನೇ ಪ್ರತಿವಾದಿಯ ಸಹಿ ಯಾವ ರೀತಿ ಇದೆ ಎಂದು ಕೇಳಲಾಗಿ ಸಾಕ್ಷಿ ಶಿ.ಹೇ.ಪಾಟೀಲ ಎಂದು ಸಹಿ ಮಾಡಿದ್ದಾರೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಎರಡೂ ರೀತಿ ಸಹಿ ಮಾಡುತ್ತಾರೆ ಎನ್ನುತ್ತಾರೆ. ಸದರಿ 3 ನೇ ಪ್ರತಿವಾದಿ ಎರಡೂ ರೀತಿಯಲ್ಲಿ ಸಹಿ ಮಾಡುತ್ತಾರೆ ಎಂದು 3 ಮತ್ತು 5 ನೇ ಪ್ರತಿವಾದಿಯರಿಗೆ ಅನುಕೂಲವಾಗಲಿ ಎಂದು ಸುಳ್ಳು

ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ನಿಡಿ-7 ದಾಖಲೆಯಲ್ಲಿ ತಾನೇ 1 ನೇ ಪ್ರತಿವಾದಿಯ ಸಹಿಯನ್ನು ಮಾಡಿರುತ್ತಾನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ನಿಡಿ-7 ದಾಖಲೆಯ ಮೇಲೆ 1 ನೇ ಪ್ರತಿವಾದಿಯ ಸುಳ್ಳು ಸಹಿಯನ್ನು ಸೃಷ್ಟಿಸಿ ಮಾಡಿದ್ದರೂ ಸಹ ಇಲ್ಲ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ಮಲ್ಲೇಶಪ್ಪ, 3 ಮತ್ತು 5 ನೇ ಪ್ರತಿವಾದಿಯರು ಸೇರಿ ಸುಳ್ಳು ದಾನ ಪತ್ರ ನಿಡಿ-7 ನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಾನ ಪತ್ರದನ್ವಯ 5 ನೇ ಪ್ರತಿವಾದಿಯ ಹೆಸರು ಸದರಿ ಸ್ವತ್ತಿಗೆ ಕಂದಾಯ ದಾಖಲೆಗಳಲ್ಲಿ ನಮೂದು ಆಗಿಲ್ಲಎಂದರೆ ಸರಿ. ಸಾಕ್ಷಿ ಮುಂದುವರೆದು ಈ ದಾವೆ ದಾಖಲಾಗಿದ್ದರಿಂದ ನಮೂದಾಗಿಲ್ಲ ಎನ್ನುತ್ತಾರೆ. ನಾವು ಖೊಟ್ಟಿ ದಾನಪತ್ರ ಸೃಷ್ಟಿಸಿಕೊಂಡಿದ್ದೇವೆ ಎಂದು ವಾದಿ ತಕರಾರು ಸಲ್ಲಿಸಿದ್ದರಿಂದ ಸದರಿ ದಾವಾ ಸ್ವತ್ತಿನ ಕಂದಾಯ ದಾಖಲೆಗಳಲ್ಲಿ 5 ನೇ ಪ್ರತಿವಾದಿಯ ಹೆಸರು ನಮೂದಾಗಿಲ್ಲ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ನಿಪಿ-27 ಖರೀದಿ ಪತ್ರವನ್ನು ತೋರಿಸಿ ಸದರಿ ಖರೀದಿಪತ್ರದಲ್ಲಿ 1 ನೇ ಪ್ರತಿವಾದಿಯ ಸಹಿಯನ್ನು ಗುರುತಿಸಲು ಸೂಚಿಸಿದಾಗ ಸಾಕ್ಷಿ ಸದರಿ ಖರೀದಿ ಪತ್ರವನ್ನು ನೋಡಿ ಸದರಿ ಖರೀದಿ ಪತ್ರದಲ್ಲಿ 1 ನೇ ಪ್ರತಿವಾದಿಯ ಹೆಸರು ಮಾತ್ರ ಬರೆದಿದೆ ಅವರು ಸಹಿ ಮಾಡಿಲ್ಲ ಎನ್ನುತ್ತಾರೆ. ಸದರಿ ನಿಪಿ-27 ಕ್ಕೆ 2 ಜನ ಸಾಕ್ಷಿದಾರರು ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದು ಇನ್ನೆರಡು ಜನ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಎರಡು ಜನ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದು ಇನ್ನೆರಡು ಜನರ ಹೆಸರು ಬರೆಯಲಾಗಿದೆ ಎನ್ನುತ್ತಾರೆ. ಸದರಿ 2 ಜನ ಸಾಕ್ಷಿದಾರರ ಸಹಿ ನಿಪಿ-27 ಕ್ಕೆ ಇದ್ದರೂ ಸಹ ಅದು ಅವರ ಹೆಸರು ಮಾತ್ರ ಇದೆ ಎಂದು ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನಿಪಿ-27 ರ ಮೇಲೆ 1 ನೇ ಪ್ರತಿವಾದಿಯ ಸಹಿ ಸಾಕ್ಷಿದಾರನ್ನಾಗಿ ಇದೆ ಎಂದರೆ ಸಾಕ್ಷಿ ಅವರ ಹೆಸರು ಮಾತ್ರ ಇದೆ ಎನ್ನುತ್ತಾರೆ. ಸದರಿ ನಿಪಿ- 27 ರ ಮೇಲೆ 2 ನೇ ಸಾಕ್ಷಿದಾರನ್ನಾಗಿ 1 ನೇ ಪ್ರತಿವಾದಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಹಿ 1 ನೇ ಪ್ರತಿವಾದಿಯ ಸಹಿ ಎಂದು ಒಪ್ಪಿಕೊಂಡರೆ 3 ಮತ್ತು 5 ನೇಪ್ರತಿವಾದಿಯರು ನನಗೆ ಆತ್ಮೀಯರಾದ್ದರಿಂದ ಅವರಿಗೆ ತೊಂದರೆ ಆಗುತ್ತದೆ ಎಂದು ತಿಳಿದು ಅದು 1 ನೇ ಪ್ರತಿವಾದಿಯ ಸಹಿ ಅಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ

ಪ್ರತಿವಾದಿ ತನ್ನ ಸಹಿಯನ್ನು ಕನ್ನಡ ಭಾಷೆಯಲ್ಲಿ ಶಿವನಗೌಡ ಹೇಮನಗೌಡ ಪಾಟೀಲ ಎಂದು ಮಾಡುತ್ತಾರೆ ಎಂದರೆ ಸರಿಯಲ್ಲ.

27. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ವಾದಿ ಹಾಗೂ 1 ರಿಂದ 4 ನೇ ಪ್ರತಿವಾದಿಯ ಮದ್ಯೆ ಯಾವುದೇ ರೀತಿಯ ಕಾನೂನು ಬದ್ಧ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ಸದರಿ ವಿಭಾಗ 1982 ರಲ್ಲಿ ಆಗಿದೆ. ಸದರಿ ಸಮಯದಲ್ಲಿ ನಾನು ಜನಿಸಿರಲಿಲ್ಲ ಎಂದರೆ ಸರಿ. ಸದರಿ ಸಮಯದಲ್ಲಿ ನಾನು ಹೇಳಿದ ಹಾಗೇ ಯಾವುದೇ ಹಿಸ್ಸೆ ಆಗಿಲ್ಲ ಎಂದರೆ ಸರಿಯಲ್ಲ. ಸದರಿ ನಾನು ಹೇಳಿದ ವಿಭಾಗದ ಸಮಯದಲ್ಲಿ 4 ನೇ ಪ್ರತಿವಾದಿಗೆ ನೋಟಿಸ್ಸು ವಗ್ಯೆರೆ ನೀಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನೊಂದಾದ ಪಾಲು ವಿಭಾಗ ಪತ್ರದ ಪ್ರಕಾರ ವಾದಿ ಹಾಗೂ 1 ರಿಂದ 4 ನೇ ಪ್ರತಿವಾದಿಯರ ಮದ್ಯೆ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ಪಾಲು ವಿಭಾಗ ಆಗಿಲ್ಲ ಎಂದರೆ ಸರಿ. ಅದೇರೀತಿ ಸದರಿಯವರು ನ್ಯಾಯಾಲಯದ ಮೂಲಕ ಸಹ ದಾವೆ ಹೂಡಿ ಪಾಲು ವಿಭಾಗ ಮಾಡಿಕೊಂಡಿಲ್ಲ ಎಂದರೆ ಸಾಕ್ಷಿ ಪ್ರತಿವಾದಿಯರು ಮಾಡಿಕೊಂಡಿಲ್ಲ ಎನ್ನುತ್ತಾರೆ. ದಾವಾ ಸ್ವತ್ತುಗಳಲ್ಲಿ ವಾದಿಗೆ ½ ಹಿಸ್ಸೆ ಹಾಗೂ 2 ರಿಂದ 4 ನೇಪ್ರತಿವಾದಿಗೆ ½ ಹಿಸ್ಸೆ ಇದೆ ಎಂದರೆ ಸರಿಯಲ್ಲ. ಅದೇರೀತಿ 4 ನೇ ಪ್ರತಿವಾದಿಗೆ ದಾವಾ ಸ್ವತ್ತುಗಳಲ್ಲಿ 1/6 ಹಿಸ್ಸೆ ಇದೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ದಾವಾ ಸ್ವತ್ತುಗಳಲ್ಲಿನ ತನ್ನ ಹಕ್ಕನ್ನು ನೊಂದಾದ ಪತ್ರದ ಮೂಲಕ ಬಿಟ್ಟು ಕೊಟ್ಟ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಡ ಉತಾರುಗಳುಇವೆ ಎನ್ನುತ್ತಾರೆ. ಆ ಬಗ್ಗೆ ಡ ಉತಾರುಗಳು ಇವೆ ಎಂದು ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

28. 1 ನೇ ಪ್ರತಿವಾದಿಗೆ ವಾದಿ ಒಬ್ಬಳು ಮಗಳು ಎಂದರೆ ಸರಿ. 5 ನೇಪ್ರತಿವಾದಿ 1 ನೇ ಪ್ರತಿವಾದಿಗೆ ಖಾಸ ಮೊಮ್ಮಗ ಅಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು 5 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಅಣ್ಣನ ಮಗನ ಮಗ ಎನ್ನುತ್ತಾರೆ. 1 ನೇ ಪ್ರತಿವಾದಿ ಹಾಗೂ ಆತನ ಅಣ್ಣ ಮತ್ತು ಆತನ ಅಣ್ಣನ ಮಕ್ಕಳು ಅಂದರೆ 2 ರಿಂದ 4 ನೇ ಪ್ರತಿವಾದಿಯರು ಒಂದೇ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಸದರಿಯವರ

ಒಂದೇ ಮನೆಯಲ್ಲಿ ವಾಸವಾಗಿದ್ದ ಸಂಗತಿ ನನಗೆ ಗೊತ್ತಿದ್ದರೂ ಸಹ ಅವರು ಒಂದೇ ಮನೆಯಲ್ಲಿ ವಾಸವಾಗಿರಲಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಬ ಶೆಡ್ಯೂಲ್ ನ 4 ನೇ ಆಸ್ತಿ 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ. 5 ನೇಪ್ರತಿವಾದಿ 1 ನೇಪ್ರತಿವಾದಿಯ ಖಾಸ ಮೊಮ್ಮಗ ಅಲ್ಲದೇ ಇದ್ದರೂ ಸಹ ಆತ 1 ನೇಪ್ರತಿವಾದಿಯ ಖಾಸ ಮೊಮ್ಮಗ ಎಂದು ನಾನು, 3 ಮತ್ತು 5 ನೇ ಪ್ರತಿವಾದಿಯರು ಸೇರಿ ಸದರಿ ದಾನ ಪತ್ರದಲ್ಲಿ ಸುಳ್ಳು ಬರೆಯಿಸಿರುತ್ತೇವೆ ಎಂದರೆ ಸರಿಯಲ್ಲ.

29. ನಾನು ಹಾಗೂ 3 ಮತ್ತು 5 ನೇ ಪ್ರತಿವಾದಿಯರು ಬಹಳ ಆತ್ಮೀಯರು ಎಂದರೆ ಸರಿಯಲ್ಲ. ನಾನು 3 ಮತ್ತು 5 ನೇ ಪ್ರತಿವಾದಿಯರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿನ ವಾದಿ, 2 ಮತ್ತು 4 ನೇ ಪ್ರತಿವಾದಿಯರ ಹಕ್ಕನ್ನು ಕಬಳಿಸುವ ಉದ್ದೇಶದಿಂದ ನಿಡಿ-7 ದಾನಪತ್ರವನ್ನು ನಾನು ಹಾಗೂ 3 ಮತ್ತು 5 ನೇಪ್ರತಿವಾದಿಯರು ಸುಳ್ಳು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

ಓ.ಹೇ.ಕೆ.ಸರಿ ಇದೆ.

ಸಹಿ/-

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.